## ಅಲೆಯನ್ಸ್ ವಿವಿಯಲ್ಲಿ ಸೌಥ್ ಜೋನ್ ಇಂಟರ್ ಯೂನಿವರ್ಸಿಟಿ ತಂಡಗಳಿಂದ ಸೆಣಸಾಟ

# ಖೋಖೋ ಮೈಸೂರು ತಂಡ ಪ್ರಥಮ




ಆನೇಕಲ್ ತಾಲೂಕಿನ ಅಲೆಯನ್ಸ್ ವಿವಿಯಲ್ಲಿ ಹಮ್ಮಿಕೊಂಡಿದ್ದ ಸೌಥ್ ಜೋನ್ ಇಂಟರ್ ಯೂನಿವರ್ಸಿಟಿ ಮಹಿಳಾ ಖೋಖೋ ಪಂದ್ಯಾವಳಿಯಲ್ಲಿ ಪ್ರಥಮಸ್ಥಾನ ಪಡೆದ ಮೈಸೂರು ಯೂನಿವರ್ಸಿಟಿ ತಂಡಕ್ಕೆ ಬಹುಮಾನ ವಿತರಿಸಲಾಯಿತು. ಖೋಖೋ ಮಾಜಿ ಆಟಗಾರ್ತಿ ಮೈಸೂರಿನ ವೀಣಾ ವಿಶು, ಅಲೆಯನ್ಸ್ ವಿಶ್ವವಿದ್ಯಾಲಯದ ಚಾನ್ಸೆಲರ್ ಅಭಯ್ ಚಬ್ಬಿ, ಶೈಲಾ ಚಬ್ಬಿ ಇತರರು ಇದ್ದರು.

■ ವಿಜಯವಾಣಿ ಸುದ್ದಿಜಾಲ ಆನೇಕಲ್

ತಾಲೂಕಿನ ಅಲೆಯನ್ಸ್ ವಿವಿಯಲ್ಲಿ ಹಮ್ಮಿಕೊಂಡಿದ್ದ ಸೌಥ್ ಜೋನ್ ಇಂಟರ್ ಯೂನಿವರ್ಸಿಟಿ ಮಹಿಳಾ ಖೋ ಖೋ ಪಂದ್ಯಾವಳಿಯಲ್ಲಿ ಮೈಸೂರು ಯೂನಿವರ್ಸಿಟಿ ಜಯಗಳಿಸಿದೆ. ಕ್ಯಾಲಿಕಟ್ ತಂಡ ರನ್ನರ್ ಅಪ್ ಆಗಿದೆ. ಮಂಗಳೂರು ಯೂನಿವರ್ಸಿಟಿ ತೃತೀಯ ಹಾಗೂ ನಾಲ್ಕನೇ ಬಹುಮಾನವನ್ನು ಕೇರಳ ಯೂನಿವರ್ಸಿಟಿ ಪಡೆದುಕೊಂಡಿದೆ.

ಅಲೆಯನ್ಸ್ ವಿವಿಯಲ್ಲಿ ನಾಲ್ಕು ದಿನ ಹಮ್ಮಿಕೊಂಡಿದ್ದ ಪಂದ್ಯಾವಳಿ ಅಂತಿಮ ಹಣಾಹಣಿ ಗುರುವಾರ ನಡೆಯಿತು.

ಪ್ರಶಸ್ತಿ ವಿತರಣೆ ಕಾರ್ಯಕ್ರಮದಲ್ಲಿ ಖೋಖೋ ಮಾಜಿ ಆಟಗಾರ್ತಿ ಮೈಸೂರಿನ ವೀಣಾ ವಿಶು ಮಾತನಾಡಿ, ಸಾಧಿಸಲು ಸಹನೆ ಮುಖ್ಯ. ನಾವು ತೆಗೆದುಕೊಳ್ಳುವ ಶ್ರಮ ನಮ್ಮ ಜೀವನದಲ್ಲಿ ಬದಲಾವಣೆ ತರುತ್ತದೆ. ಈ ನಿಟ್ಟಿನಲ್ಲಿ ಧೈರ್ಯದಿಂದ ಮುನ್ನುಗ್ಗಿದಾಗ ಮಾತ್ರ ಗೆಲುವು ಲಭಿಸುತ್ತದೆ ಎಂದು ಹೇಳಿದರು.

ಅಲೆಯನ್ಸ್ ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಡಾ. ಪುನೀತ್ ಕರಿಯಪ್ಪ ಮಾತನಾಡಿ, ವಿವಿಯಿಂದ ಅದ್ದೂರಿಯಾಗಿ ಕ್ರೀಡಾ ಉತ್ಸವ ಹಮ್ಮಿಕೊಂಡಿದ್ದು, 60ಕ್ಕೂ ಹೆಚ್ಚು ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಮುಂದಿನ ದಿನಗಳಲ್ಲಿ ಇನ್ನಷ್ಟು ಕ್ರೀಡಾಕೂಟ ಆಯೋಜಿಸಲಾಗುವುದು ಎಂದರು.

ಆಲ್ ರೌಂಡರ್ ಪ್ರಶಸ್ತಿಯನ್ನು ಎಂ.ವೀಣಾ ಮೈಸೂರು ಪಡೆದುಕೊಂಡರು. ಬೆಸ್ಟ್ ಚೇಸರ್ ಪ್ರಶಸ್ತಿಯನ್ನು ಮಂಗಳೂರು ಯೂನಿವರ್ಸಿಟಿಯ ದಿವ್ಯಾ ಪಡೆದುಕೊಂಡರು.

ಕರ್ನಾಟಕ ಖೋಖೋ ತೀರ್ಪುಗಾರರ ಮಂಡಳಿ ಉಪಾಧ್ಯಕ್ಷ ಸಿದ್ದಲಿಂಗಮೂರ್ತಿ, ಖೋಖೋ ಅಸೋಸಿಯೇಷನ್ ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನಯ್ಯ, ಕಾಂತರಾಜು ಮತ್ತಿತರರು ಇದ್ದರು.

kannada matrimony
ವಧು ಅಥವಾ ವರರನ್ನು ಹುಡುಕಲು ಸಹಾಯ ಬೇಕೆ?
ನಮಗೆ ಕರೆ ಮಾಡಿ 70928 77888, ನೋಂದಣಿ ಉಚಿತ!
ಕನ್ನಡಿಗರ ನಂ.1 ಆಯ್ಕೆ, 22 ವರ್ಷಗಳಿಂದ